## ದಿನಾಂಕ:23-01-2014 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಂಡ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಎಂ.ಮುನಿರಾಜು** | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 2 | **ಎಸ್.ಹೆಚ್.ಪದ್ಮರಾಜ್** | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ |
| 3 | **ಎಂ.ಸಿ.ಶ್ರೀನಿವಾಸ್** | ಸದಸ್ಯರು | 3 | ವಲಯ ಅರಣ್ಯಾಧಿಕಾರಿಗಳು (ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾಜರಾಜೇಶ್ವರಿನಗರ) |
| 4 | **ಆರ್.ಪಿ.ಶಶಿ** | ಸದಸ್ಯರು | | |
| 5 | **ಪುಟ್ಟಮ್ಮ** | ಸದಸ್ಯರು | 4 | ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 6 | **ವಿಜಯ ಎಸ್.ಎಸ್.ಪ್ರಸಾದ್** | ಸದಸ್ಯರು | | |
| 7 | **ಎಸ್.ಗಂಗಾಧರ್** | ಸದಸ್ಯರು | 5 | ಕಾ.ಪಾ.ಅ.(ಯೋಜನೆ-ದಾಸರಹಳ್ಳಿ/ಪೂರ್ವ/ಪಶ್ಚಿಮ/ರಾಜರಾಜೇಶ್ವರಿನಗರ/ ಮಹದೇವಪುರ |
| 8 | **ಕೆ.ಆರ್.ಯಶೋಧಮ್ಮ** | ಸದಸ್ಯರು | | |
| 9 | **ಪಳನಿಯಮ್ಮಾಳ್** | ಸದಸ್ಯರು | 6 | ಕಾರ್ಯಪಾಲಕ ಅಭಿಯಂತರರು(ಯೋಜನೆ-ಕೆರೆಗಳು) |
| 10 | **ಲಲಿತಾ** | ಸದಸ್ಯರು | | |
| 11 | **ಗೋಪಾಲಕೃಷ್ಣ.ಟಿ** | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

**ಶ್ರೀಮತಿ.ಕೆ.ಆರ್.ಯಶೋಧಮ್ಮ, ಸದಸ್ಯರು** ಉದ್ಯಾನವನಗಳ ನಿರ್ವಹಣೆಯ ಬಗ್ಗೆ ಮಾತನಾಡುತ್ತಾ, ವಾರ್ಡ್ ಸಂಖ್ಯೆ.11ರ ವ್ಯಾಪ್ತಿಯಲ್ಲಿನ ಉದ್ಯಾನವನಗಳಲ್ಲಿ ಔಷಧಿಯುಕ್ತ ಗಿಡಗಳು, ಜನೋಪಯೋಗಿ ಸಸ್ಯಗಳನ್ನು ಬೆಳೆಸಲಾಗಿದ್ದು, ನಿರ್ವಹಣೆ ಕಾರ್ಯ ಸಮರ್ಪಕವಾಗಿಲ್ಲದೆ, ಉದ್ಯಾನವನಗಳಲ್ಲಿ ಹುಲ್ಲು-ಪೊದೆಗಳು ಬೆಳೆದು, ತರಗೆಲೆಗಳು ಉದುರಿ ಬೆಂಕಿ ಹತ್ತಿಕೊಂಡು ಅನಾಹುತಗಳಾಗುತ್ತಿದೆ ಎಂದು ತಿಳಿಸುತ್ತಾ, ಉದ್ಯಾನವನಗಳು ಸಾರ್ವಜನಿಕರು ಓಡಾಡುವ ರಸ್ತೆಗಳ ಅಕ್ಕಪಕ್ಕದಲ್ಲಿರುವುದರಿಂದ ನಾಗರೀಕರ ಹಿತದೃಷ್ಠಿಯಿಂದ ಉದ್ಯಾನವನಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಅಧಿಕಾರಿಗಳಿಗೆ ತಿಳಿಸಿದರು.

**ಅಧ್ಯಕ್ಷರು** ಮಾತನಾಡುತ್ತಾ, ಉದ್ಯಾನವನಗಳ ಸುರಕ್ಷತೆಯ ದೃಷ್ಠಿಯಿಂದ ಉದ್ಯಾನವನಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

### 1. ವಿಷಯದ ಸಂಖ್ಯೆ:ತೋ/ಸ್ಥಾ/ಸ/16/13-14, ದಿನಾಂಕ: 27-12-2013

ದಕ್ಷಿಣ ವಲಯ-1 ಮತ್ತು ದಕ್ಷಿಣ ವಲಯ-2ರ ವ್ಯಾಪ್ತಿಗೆ ಬರುವ ಉದ್ಯಾನವನಗಳ ನಿರ್ವಹಣೆ ಕಾರ್ಯಕ್ರಮವನ್ನು 2013-14ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಹಾಗೂ

ಉಲ್ಲೇಖ–1ರನ್ವಯ ದಕ್ಷಿಣ ವಲಯ–1 ಮತ್ತು ದಕ್ಷಿಣ ವಲಯ–2ಕ್ಕೆ ಹಂಚಿಕೆಯಾಗಿರುವ ರೂ.250.00ಲಕ್ಷಗಳಿಗೆ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಅನುದಾನ ಕಾಯ್ದಿರಿಸಿ ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಸಮಿತಿಯ ನಿರ್ಣಯದಂತೆ, ದಕ್ಷಿಣ ವಲಯ–2ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ P0088ರ ಅಡಿಯಲ್ಲಿ ರೂ.133.23ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:27–12–2013 ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:27–12–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 2. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/17/13–14, ದಿನಾಂಕ: 27–12–2013</u>

ದಕ್ಷಿಣ ವಲಯ–1 ಮತ್ತು ದಕ್ಷಿಣ ವಲಯ–2ರ ವ್ಯಾಪ್ತಿಗೆ ಬರುವ ಉದ್ಯಾನವನಗಳ ನಿರ್ವಹಣೆ ಕಾರ್ಯಕ್ರಮವನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಉಲ್ಲೇಖ–1ರನ್ವಯ ದಕ್ಷಿಣ ವಲಯ–1 ಮತ್ತು ದಕ್ಷಿಣ ವಲಯ–2ಕ್ಕೆ ಹಂಚಿಕೆಯಾಗಿರುವ ರೂ.250.00ಲಕ್ಷಗಳಿಗೆ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಅನುದಾನ ಕಾಯ್ದಿರಿಸಿ ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಸಮಿತಿಯ ನಿರ್ಣಯದಂತೆ, ದಕ್ಷಿಣ ವಲಯ–1ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ P0088ರ ಅಡಿಯಲ್ಲಿ ರೂ.121.55ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:27–12–2013 ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:27–12–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 3. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/18/13–14, ದಿನಾಂಕ: 28–12–2013</u>

2013–14ನೇ ಸಾಲಿನಲ್ಲಿ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ರೀ–ಬ್ಯಾಗಿಂಗ್ ಮಾಡುವ ಹಾಗೂ ಸಸಿಗಳನ್ನು ಪೋಷಿಸುವ ಕಾಮಗಾರಿಯನ್ನು ದಿನಾಂಕ:01–01–2014 ರಿಂದ 31–03–2014 ರವರೆಗೆ ನಿರ್ವಹಿಸಲು ಮತ್ತು ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಯನ್ನು ದಿನಾಂಕ:01–04–2014 ರಿಂದ 30–09–2014 ರವರೆಗೆ ನಿರ್ವಹಿಸುವ ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆಯನ್ನು ನಡೆಸುವ ಸಲುವಾಗಿ ಅನುಮೋದನೆಯನ್ನು ಕೋರಿರುತ್ತಾರೆ.

ಸದರಿ ಕಾಮಗಾರಿಯು ಋತುಮಾನಕ್ಕನುಗುಣವಾಗಿ ನಿರ್ವಹಿಸುವ ಕಾಮಗಾರಿಗಳಾಗಿದ್ದು, ತುರ್ತಾಗಿ ಟೆಂಡರ್ ಪ್ರಕ್ರಿಯೆಯನ್ನು ನಡೆಸಬೇಕಾಗಿರುವುದರಿಂದ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ರೀ-ಬ್ಯಾಗಿಂಗ್ ಮಾಡಲು ಹಾಗೂ ಸಸಿಗಳನ್ನು ಪೋಷಿಸಲು ತಗಲುವ ಅಂದಾಜು ಮೊತ್ತ ರೂ.**70.65** ಲಕ್ಷಗಳಾಗಿದ್ದು, ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿಗೆ ರೂ.**166.01** ಲಕ್ಷಗಳ ವೆಚ್ಚವಾಗಲಿದ್ದು, ಈ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರ್ ಪ್ರಕ್ರಿಯೆ ನಡೆಸಲು ಹಾಗೂ ಇದಕ್ಕೆ ತಗಲುವ ವೆಚ್ಚಗಳಿಗೆ 2013–14ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆಗಳಡಿ ಜಾಬ್‌ಕೋಡ್ ನೀಡಲು ಅನುಮೋದನೆಯನ್ನು ನೀಡುವ ಸಂಬಂಧ, ಈ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ: 24–12–2013 ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ಆಯುಕ್ತರವರ ದಿನಾಂಕ: 24–12–2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 4. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/20/13–14, ದಿನಾಂಕ: 02–01–2014</u>

ತೋಟಗಾರಿಕೆ ಸ್ಥಾಯಿ ಸಮಿತಿ ದಿನಾಂಕ:09–10–2013ರ ಸಭೆಯ ವಿಷಯದ ಸಂಖ್ಯೆ:ತೋ.ಸ್ಥಾ.ಸ/07/ 2013–14 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್‌ಗಳ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ 2013–14ನೇ ಸಾಲಿನ ಆಯವ್ಯಯದಲ್ಲಿ ಪಿ–0088 ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.3000.00 ಲಕ್ಷಗಳನ್ನು ಕಾಯ್ದಿರಿಸಿರುವ ಅನುದಾನದಲ್ಲಿ ರೂ.1400.00 ಲಕ್ಷಗಳನ್ನು ವಲಯವಾರು ಉದ್ಯಾನವನಗಳಿಗೆ ಹಂಚಿಕೆ ಮಾಡಿದ್ದು ಮತ್ತು ಪಾಲಿಕೆಯ ಗೌರವಾನ್ವಿತ ಸದಸ್ಯರ ಅನುದಾನದಲ್ಲಿ ರೂ.25.00 ಲಕ್ಷಗಳ ಕಾಮಗಾರಿಯನ್ನು ಕೈಗೊಳ್ಳುವಂತೆ ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.127ರ ಹೆರಿಗೆ ಆಸ್ಪತ್ರೆ ಮುಂಭಾಗದ ಉದ್ಯಾನವನಕ್ಕೆ ಶೆಲ್ಟರ್ ನಿರ್ಮಾಣ, ಉದ್ಯಾನವನಕ್ಕೆ ಎಂ.ಎಸ್.ಗೇಟ್ ಅಳವಡಿಸುವುದು ಹಾಗೂ ಎಂ.ಎಸ್.ಗ್ರಿಲ್ ಅಳವಡಿಸುವುದು ಹಾಗೂ ಕೈಲಾಸಗಿರಿ ಉದ್ಯಾನವನಕ್ಕೆ ಮಕ್ಕಳ ಆಟಿಕೆಗಳನ್ನು ಹಾಕಿಸುವುದು ಹಾಗೂ ಉದ್ಯಾನವನಕ್ಕೆ ಗ್ರಾನೈಟ್ ಬೆಂಚ್‌ಗಳನ್ನು ಸರಬರಾಜು ಮಾಡುವುದು ಇತ್ಯಾದಿ ಅಂಶಗಳನ್ನು ಅಳವಡಿಸಿಕೊಂಡು ರೂ.25.00 ಲಕ್ಷಗಳ ಅಂದಾಜು ಪಟ್ಟಿಯನ್ನು 2012–13ನೇ ಸಾಲಿನ ದರಗಳನ್ವಯ ತಯಾರಿಸಲಾಗಿರುತ್ತದೆ.

ಆದ್ದರಿಂದ, ಸದರಿ ಕಾಮಗಾರಿಯನ್ನು ದಿನಾಂಕ:09–10–2013ರ ತೋಟಗಾರಿಕೆ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ತಿಳಿಸಿರುವಂತೆ, ವಾರ್ಡ್ ಸದಸ್ಯರ ಅನುದಾನದ ಕಾಮಗಾರಿಯನ್ನು ಕೈಗೊಳ್ಳಲು ಸಮಿತಿಯ ಸಭೆಯಲ್ಲಿ ತೀರ್ಮಾನಿಸಿರುವುದರಿಂದ ಸದರಿ ಕಾಮಗಾರಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:31–12–2013 ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:31–12–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಮುಖಾಂತರ ನಿರ್ವಹಿಸಲು ಸಮಿತಿ ತೀರ್ಮಾನಿಸಿತು.**

**5. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/21/13–14, ದಿನಾಂಕ: 02–01–2014</u>**

ಬೊಮ್ಮನಹಳ್ಳಿ ವಲಯ ವ್ಯಾಪ್ತಿಗೆ ಬರುವ ಉದ್ಯಾನವನಗಳ ನಿರ್ವಹಣೆ ಕಾರ್ಯಕ್ರಮವನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಉಲ್ಲೇಖ–1ರನ್ವಯ ಬೊಮ್ಮನಹಳ್ಳಿ ವಲಯಕ್ಕೆ ಹಂಚಿಕೆಯಾಗಿರುವ ರೂ.150.00ಲಕ್ಷಗಳಿಗೆ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಅನುದಾನ ಕಾಯ್ದಿರಿಸಿ ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಸಮಿತಿಯ ನಿರ್ಣಯದಂತೆ, ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ P0088ರ ಅಡಿಯಲ್ಲಿ ರೂ.150.00ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 30–12–2013 ರ ಟಿಪ್ಪಣಿ.

**<u>ನಿರ್ಣಯ:</u>– ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 30–12–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**6. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/22/13–14, ದಿನಾಂಕ: 02–01–2014</u>**

ವಾರ್ಡ್ ಸಂಖ್ಯೆ.197ರ ಉದ್ಯಾನವನ ಅಭಿವೃದ್ಧಿ ಮೊತ್ತ ರೂ.100.00 ಲಕ್ಷಗಳಿಗೆ 2013–14ರ ಲೆಕ್ಕಶೀರ್ಷಿಕೆ ಪಿ–0311 ಉದ್ಯಾನವನಗಳ ಅಭಿವೃದ್ಧಿ ಅಡಿ ಮುಂದುವರೆದ ಕಾಮಗಾರಿಗಳ ಅಡಿ ಜಾಬ್ ಸಂಖ್ಯೆ ನೀಡಲು ವಾರ್ಡ್ ಸಂಖ್ಯೆ.197ರ ಪಾಲಿಕೆ ಸದಸ್ಯರು ತಮ್ಮ ಪತ್ರದಲ್ಲಿ ಕೋರಿರುತ್ತಾರೆ.

2013–14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ.75ರಲ್ಲಿ ಪಿ0311 ಅಡಿ current works ಅಡಿ ಅನುದಾನ ಮೀಸಲಿಟ್ಟಿರುವುದಿಲ್ಲ. Spill over works ಅಡಿ ರೂ.500.00ಲಕ್ಷಗಳು pending billಗಾಗಿ ರೂ.660.00 ಲಕ್ಷಗಳನ್ನು ಮೀಸಲಿರಿಸಿದೆ. ಒಟ್ಟಾರೆ ರೂ.1160.00 ಅನುದಾನ ಅಳವಡಿಸಿಕೊಳ್ಳಲಾಗಿದೆ. 2011–12 ಮತ್ತು 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–0311 ಅಡಿ ರೂ.402.58ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, 2012–13ನೇ ಸಾಲಿನಲ್ಲಿ ಬಾಕಿ ಬಿಲ್ಲುಗಳಿಗಾಗಿ ರೂ.660.00ಲಕ್ಷ ಅನುದಾನ ಮೀಸಲಿರಿಸಿದ್ದು, ಮುಂದುವರೆದ ಕಾಮಗಾರಿಗಳ ಅಡಿ ಮೀಸಲಿಟ್ಟಿರುವ ಅನುದಾನ ರೂ.500.00 ಲಕ್ಷಗಳಲ್ಲಿ ಬದಲಿ ಕಾಮಗಾರಿಗಳಿಗೆ ಹಾಗೂ ಮುಂದುವರೆದ ಕಾಮಗಾರಿಗಳಿಗೆ ಒಟ್ಟು ಮೊತ್ತ ರೂ.211.00ಲಕ್ಷಗಳಿದ್ದು, ರೂ.289.00ಲಕ್ಷಗಳು ಉಳಿತಾಯವಾಗಲಿದೆ. ಸದರಿ ಉಳಿತಾಯದ ಮೊತ್ತದಲ್ಲಿ ಪ್ರಸ್ತಾವನೆ ಮೊತ್ತ ರೂ.100.00 ಲಕ್ಷಗಳ ಅನುದಾನವನ್ನು ಭರಿಸಿಕೊಳ್ಳುವ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡುವ ಬಗ್ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:31–12–2013 ರ ಟಿಪ್ಪಣಿ.

| Sl. No. | Name of work | Estimate cost (in Lakhs) |
|---|---|---|
| 1. | Improvements to park and other development works in Narayana nagara in ward No.197. | 25.00 |

| | | |
|---|---|---|
| 2. | Improvements to park and other development works in Maruthi nagara in ward No.197. | 25.00 |
| 3. | Improvements to park and other development works in Ramanjaneya nagara in ward No.197 | 25.00 |
| 4. | Providing Electrical Lighting to devarakere in ward No.197, Vasanthapura | 13.00 |
| 5. | Providing Electrical Lighting to parks at Narayana nagara, Maturhi layout and Ramanjaneya nagara in ward No.197, Vasanthapura. | 12.00 |
| | **Total** | **100.00** |

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:31–12–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಈ ಕಾಮಗಾರಿಗಳನ್ನು ಕೆ.ಆರ್.ಡಿ.ಐ.ಎಲ್.ಸಂಸ್ಥೆಯ ಮುಖಾಂತರ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

**7. ವಿಷಯದ ಸಂಖ್ಯೆ:ತೋ/ಸ್ಥಾ/ಸ/23/13–14, ದಿನಾಂಕ: 02–01–2014**

ಮಹದೇವಪುರ ವಲಯ ವ್ಯಾಪ್ತಿಗೆ ಬರುವ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಕಾರ್ಯಕ್ರಮವನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಉಲ್ಲೇಖ–1ರನ್ವಯ ಮಹದೇವಪುರ ವಲಯಕ್ಕೆ ಹಂಚಿಕೆಯಾಗಿರುವ ರೂ.100.00ಲಕ್ಷಗಳಿಗೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಲು ಅನುದಾನ ಕಾಯ್ದಿರಿಸಿ, ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

ಸಮಿತಿಯ ನಿರ್ಣಯದಂತೆ, ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ P0088ರ ಅಡಿಯಲ್ಲಿ ರೂ.100.00ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 31–12–2013 ರ ಟಿಪ್ಪಣಿ.

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:31–12–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**8. ವಿಷಯದ ಸಂಖ್ಯೆ:ತೋ/ಸ್ಥಾ/ಸ/24/13–14, ದಿನಾಂಕ: 02–01–2014**

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಗೆ ಬರುವ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆ ಕಾರ್ಯಕ್ರಮವನ್ನು 2013–14ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಉಲ್ಲೇಖ–1 ರನ್ವಯ ರಾಜರಾಜೇಶ್ವರಿನಗರ ವಲಯಕ್ಕೆ ಈ ಕೆಳಕಂಡಂತೆ ಹಂಚಿಕೆಯಾಗಿರುವ ಮೊತ್ತವನ್ನು ಉದ್ಯಾನವನಗಳನ್ನು ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಲು ಅನುದಾನವನ್ನು ಕಾಯ್ದಿರಿಸಿ, ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

| ಕ್ರ. ಸಂ. | ಲೆಕ್ಕಶೀರ್ಷಿಕೆ | ಶೀರ್ಷಿಕೆ ವಿವರ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | P0088 | ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ | 150.00 |
| 2. | P2680 | ಜೆ.ಪಿ.ಉದ್ಯಾನವನದ ಅಭಿವೃದ್ಧಿ ಹಾಗೂ ನಿರ್ವಹಣೆ ಕಾಮಗಾರಿ | 50.00 |
| 3. | P2680 | ಜೆ.ಪಿ. ಉದ್ಯಾನವನದ 3ನೇ ಹಂತದ ಸೌಂದರ್ಯೀಕರಣದ ಕಾಮಗಾರಿ | 70.00 |
| | | **ಒಟ್ಟು ರೂ.** | **270.00** |

ಸಮಿತಿಯ ನಿರ್ಣಯದಂತೆ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಕೈಗೊಳ್ಳಲು ಲೆಕ್ಕಶೀರ್ಷಿಕೆ P0088, P2680ರ ಅಡಿಯಲ್ಲಿ ರೂ.270.00ಲಕ್ಷಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 31–12–2013 ರ ಟಿಪ್ಪಣಿ.

<u>**ನಿರ್ಣಯ:–**</u> **ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:31–12–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪುತ್ತಾ, ಜೆ.ಪಿ.ನಗರ ಉದ್ಯಾನವನದ ಅಭಿವೃದ್ಧಿ ಹಾಗೂ ನಿರ್ವಹಣೆಯನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆಯ ಮುಖಾಂತರ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

**9. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/25/13–14, ದಿನಾಂಕ: 02–01–2014</u>**

ತೋಟಗಾರಿಕೆ ಸ್ಥಾಯಿ ಸಮಿತಿಯ **ದಿನಾಂಕ:09–10–2013ರ ಸಭೆಯ ವಿಷಯ ಸಂಖ್ಯೆ: ತೋ.ಸ್ಥಾ.ಸ/07/2013–14 ರಂತೆ,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್‌ಗಳ ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ 2013–14ನೇ ಸಾಲಿನ ಆಯವ್ಯಯದಲ್ಲಿ **ಪಿ–0088** ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.3000.00 ಲಕ್ಷಗಳನ್ನು ಕಾಯ್ದಿರಿಸಿರುವ ಅನುದಾನದಲ್ಲಿ **ರೂ.1400.00** ಲಕ್ಷಗಳನ್ನು ವಲಯವಾರು ಉದ್ಯಾನವನಗಳಿಗೆ ಹಂಚಿಕೆ ಮಾಡಿದ್ದು ಮತ್ತು ಪಾಲಿಕೆಯ ಗೌರವಾನ್ವಿತ ಸದಸ್ಯರುಗಳ ವಾರ್ಡ್‌ಗಳಿಗೆ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ವಾರ್ಡ್ ಸಂಖ್ಯೆ.99ರ ಗೌರವಾನ್ವಿತ ಸದಸ್ಯರ ಅನುದಾನದಲ್ಲಿ **ರೂ.20.00ಲಕ್ಷ**ಗಳನ್ನು ನಿಗಧಿಪಡಿಸಲಾಗಿರುತ್ತದೆ. ತುರ್ತಾಗಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಬೇಕಾಗಿರುವ ಕಾರಣ ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನವನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.99ರ ರಾಜಾಜಿನಗರ ವ್ಯಾಪ್ತಿಯ ಸಿದ್ದಪ್ಪಾಜಿ ಉದ್ಯಾನವನದಲ್ಲಿ ಪಾದಚಾರಿ ಮಾರ್ಗಕ್ಕೆ ಯರೋಕಾನ್ ಟೈಲ್ಸ್ ಅಳವಡಿಸಿ, ಸ್ಟೆಪ್ಪುಗಳಿಗೆ ಎಸ್.ಎಸ್.ರೈಲಿಂಗ್ಸ್ ಅಳವಡಿಕೆ, ಕರ್ಬ್‌ಸ್ಟೋನ್ ಅಳವಡಿಸುವುದು, ಎಂ.ಎಸ್.ಗ್ರಿಲ್, ಗೇಟ್

ಅಳವಡಿಸುವುದು, ಫೆನ್ಸಿಂಗ್‌ಗಳಿಗೆ ಹಾಗೂ ಕರ್ಬ್‌ಗಳಿಗೆ ಬಣ್ಣ ಬಳಿಯುವುದು ಹಾಗೂ ಡಸ್ಟ್‌ಬಿನ್ ಅಳವಡಿಸುವುದು, ಇತ್ಯಾದಿ ಅಂಶಗಳನ್ನು ಅಳವಡಿಸಿಕೊಂಡು ರೂ.20.00 ಲಕ್ಷಗಳ ಮೊತ್ತದ ಅಂದಾಜು ಪಟ್ಟಿಯನ್ನು 2013–14ನೇ ಸಾಲಿನ ದರಗಳನ್ವಯ ತಯಾರಿಸಲಾಗಿರುತ್ತದೆ.

ಆದ್ದರಿಂದ, ಸದರಿ ಕಾಮಗಾರಿಯನ್ನು ದಿನಾಂಕ:09–10–2013ರ ತೋಟಗಾರಿಕೆ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ತಿಳಿಸಿರುವಂತೆ, ವಾರ್ಡ್ ಸದಸ್ಯರ ಅನುದಾನದ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖಾಂತರ ಕೈಗೊಳ್ಳಲು ಸಮಿತಿಯ ಸಭೆಯಲ್ಲಿ ತೀರ್ಮಾನಿಸಿರುವುದರಿಂದ ಸದರಿ ಕಾಮಗಾರಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:01–01–2014 ರ ಟಿಪ್ಪಣಿ.

| Sl. No. | Name of work | Estimate cost (in Lakhs) |
|---|---|---|
| 1. | Development of Siddappaji park in Ward No.99 | 20.00 |

**<u>ನಿರ್ಣಯ</u>:– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:01–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**10. ವಿಷಯದ ಸಂಖ್ಯೆ:ತೋ/ಸ್ಥಾ/ಸ/26/13–14, ದಿನಾಂಕ: 08–01–2014**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2013–14ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ತೋಟಗಾರಿಕೆ ವಿಭಾಗಕ್ಕೆ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ರೂ.3000.00 ಲಕ್ಷಗಳು ಮತ್ತು ಬೋರ್‌ವೆಲ್‌ಗಳ ನಿರ್ವಹಣೆಗಾಗಿ ರೂ.10.00ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು, ಒಟ್ಟು ರೂ.3010.00ಲಕ್ಷಗಳಿಗೆ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಲೆಕ್ಕ ಶೀರ್ಷಿಕೆವಾರು ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಶೀರ್ಷಿಕೆವಾರು ಕಾರ್ಯಕ್ರಮಗಳು | ಲೆಕ್ಕ ಶೀರ್ಷಿಕೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 01 | ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ | ಪಿ–0088 | 3000.00 |
| 02 | ಬೋರ್‌ವೆಲ್‌ಗಳ ನಿರ್ವಹಣೆ | ಪಿ–0299 | 10.00 |
| | | **ಒಟ್ಟು** | **3010.00** |

ನಿಗಧಿಪಡಿಸಿರುವ ಅನುದಾನದಲ್ಲಿ ಯಲಹಂಕ ವಲಯಕ್ಕೆ ರೂ.150.00ಲಕ್ಷ ಹಾಗೂ ಬೋರ್‌ವೆಲ್ ನಿರ್ವಹಣೆಗೆ ರೂ.10.00ಲಕ್ಷಗಳನ್ನು ಉಲ್ಲೇಖ ಪತ್ರದಲ್ಲಿ ಹಂಚಿಕೆ ಮಾಡಿರುತ್ತಾರೆ.

| ಕ್ರಮ ಸಂಖ್ಯೆ | ಶೀರ್ಷಿಕೆವಾರು ಕಾರ್ಯಕ್ರಮಗಳು | ಲೆಕ್ಕ ಶೀರ್ಷಿಕೆ | ಕಾಮಗಾರಿಗಳ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 01 | ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ | ಪಿ–0088 | **76** | **150.00** |
| 02 | ಬೋರ್‌ವೆಲ್‌ಗಳ ನಿರ್ವಹಣೆ | ಪಿ–0299 | **30** | **10.00** |
| | | | **ಒಟ್ಟು** | **160.00** |

ಯಲಹಂಕ ವಲಯದ ನಿರ್ವಹಣೆ ಕಾಮಗಾರಿಗಳಿಗೆ ರೂ.160.00ಲಕ್ಷಗಳಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಈ ಟಿಪ್ಪಣಿಯೊಂದಿಗೆ ಲಗತ್ತಿಸಿದೆ. ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 07–01–2014 ರ ಟಿಪ್ಪಣಿ.

**<u>ನಿರ್ಣಯ:</u>** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 07–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 11. ವಿಷಯದ ಸಂಖ್ಯೆ:ತೋ/ಸ್ಥಾ/ಸ/27/13–14, ದಿನಾಂಕ: 08–01–2014

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯದ ವ್ಯಾಪ್ತಿಯ ಉದ್ಯಾನವನಗಳನ್ನು 2013–14ನೇ ಸಾಲಿನ ಕಾರ್ಯಕ್ರಮದಡಿಯಲ್ಲಿ ಕ್ರಿಯಾ ಯೋಜನೆ ತಯಾರಿಸಿ ಉದ್ಯಾನವನಗಳ ಖಾಸಗಿ ನಿರ್ವಹಣೆ ಮತ್ತು ಉದ್ಯಾನವನಗಳಲ್ಲಿರುವ ಕೊಳವೆ ಬಾವಿಗಳ ವಿದ್ಯುತ್ ದುರಸ್ಥಿ ಕಾಮಗಾರಿಗಳ ಕೆಲಸಗಳನ್ನು ಪಿ ಕೋಡ್ ಪಿ–0088 ರಲ್ಲಿ ರೂ.249.99 ಲಕ್ಷಗಳಿಗೆ ತಯಾರಿಸಲಾಗಿದೆ. ಉದ್ಯಾನವನಗಳ ಖಾಸಗಿ ನಿರ್ವಹಣೆ ಮತ್ತು ಕೊಳವೆಬಾವಿಗಳ ವಿದ್ಯುತ್ ದುರಸ್ಥಿ ಕಾಮಗಾರಿಗಳ ಕೆಲಸಗಳನ್ನು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆಗಾಗಿ ಹಾಗೂ ಜಾಬ್ ಸಂಖ್ಯೆ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06–01–2014 ರ ಟಿಪ್ಪಣಿ.

| Sl. No. | p-code | programme | No. of Works | Amount (in Lakhs) |
|---|---|---|---|---|
| 1. | P-0088 | Maintenance and Mangement of Parks | 127 | 233.36 |
| 2. | p-0088 | Repair and Maintenance of Borewell | 33 | 16.63 |
| | | **Total** | **160** | **249.99** |

**<u>ನಿರ್ಣಯ:–</u>** **ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:06–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 12. ವಿಷಯದ ಸಂಖ್ಯೆ:ತೋ/ಸ್ಥಾ/ಸ/28/13–14, ದಿನಾಂಕ: 08–01–2014

ತೋಟಗಾರಿಕೆ ಇಲಾಖೆಯ (ಪೂರ್ವ) ವಿಭಾಗದ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ 2013–14ನೇ ಸಾಲಿನಲ್ಲಿ ರೂ.250.00ಲಕ್ಷಗಳ (ಇನ್ನೂರ ಐವತ್ತು ಲಕ್ಷ ರೂ.ಗಳು ಮಾತ್ರ)ಗಳ ಅನುದಾನವನ್ನು ಒದಗಿಸಲಾಗಿದೆ. ಅದರನ್ವಯ, ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಿಯಾಯೋಜನೆಯನ್ನು ತಯಾರಿಸಲಾಗಿದೆ.

| ಕ್ರ.ಸಂ. | ಕಾರ್ಯಕ್ರಮದ ವಿವರಗಳು | ಅಗತ್ಯವಿರುವ ಅನುದಾನ (ಲಕ್ಷಗಳಲ್ಲಿ) |
|---|---|---|
| 01 | ಉದ್ಯಾನವನಗಳ ನಿರ್ವಹಣೆ | 23992700–00 |
| 02 | ಉದ್ಯಾನವನಗಳಲ್ಲಿರುವ ಬೋರ್‌ವೆಲ್‌ಗಳ ನಿರ್ವಹಣೆಗಾಗಿ | 1007300–00 |
| **ಒಟ್ಟು ರೂ.** | | **25000000–00** |

ಒಟ್ಟು ಮೊತ್ತ ರೂ.250.00ಲಕ್ಷ(ಇನ್ನೂರ ಐವತ್ತು ಲಕ್ಷ ರೂ.ಗಳು ಮಾತ್ರ) ಗಳಿಗೆ ತಯಾರಿಸಲಾದ ಮೇಲ್ಕಂಡ ಕ್ರಿಯಾಯೋಜನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06–01–2014 ರ ಟಿಪ್ಪಣಿ.

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:06–01–2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 13. ವಿಷಯದ ಸಂಖ್ಯೆ:ತೋ/ಸ್ಥಾ/ಸ/29/13–14, ದಿನಾಂಕ: 10–01–2014

ವಾರ್ಡ್ ಸಂಖ್ಯೆ.193ರ ಉದ್ಯಾನವನ ಅಭಿವೃದ್ಧಿ ಮೊತ್ತ ರೂ.50.00 ಲಕ್ಷಗಳಿಗೆ 2013–14 ರ ಲೆಕ್ಕಶೀರ್ಷಿಕೆ ಪಿ–0311 ಉದ್ಯಾನವನಗಳ ಅಭಿವೃದ್ಧಿ ಅಡಿ ಮುಂದುವರೆದ ಕಾಮಗಾರಿಗಳ ಅಡಿ, ಜಾಬ್‌ಸಂಖ್ಯೆ ನೀಡಲು ವಾರ್ಡ್ ಸಂಖ್ಯೆ 193ರ ಪಾಲಿಕೆ ಸದಸ್ಯರು ತಮ್ಮ ಪತ್ರದಲ್ಲಿ ಕೋರಿರುತ್ತಾರೆ.

2013–14ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ.75 ರಲ್ಲಿ ಪಿ–0311 ಅಡಿ Current Works ಅಡಿ ಅನುದಾನ ಮೀಸಲಿಟ್ಟಿರುವುದಿಲ್ಲ. Spillover works ಅಡಿ ರೂ.500.00ಲಕ್ಷಗಳು, Pending bill ಗಳಿಗಾಗಿ ರೂ.660.00 ಲಕ್ಷಗಳನ್ನು ಮೀಸಲಿರಿಸಿದೆ. ಒಟ್ಟಾರೆ ರೂ.1160.00 ಅನುದಾನ ಅಳವಡಿಸಿಕೊಳ್ಳಲಾಗಿದೆ. 2011–12 ಮತ್ತು 2012–13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–0311 ಅಡಿ ರೂ.402.58 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದ್ದು, 2012–13ನೇ ಸಾಲಿನಲ್ಲಿ ಬಾಕಿ ಬಿಲ್ಲುಗಳಿಗಾಗಿ ರೂ.660.00 ಲಕ್ಷ ಅನುದಾನ ಮೀಸಲಿರಿಸಿದ್ದು, ಮುಂದುವರೆದ ಕಾಮಗಾರಿಗಳ ಅಡಿ ಮೀಸಲಿಟ್ಟಿರುವ ಅನುದಾನ ರೂ.500.00 ಲಕ್ಷಗಳಲ್ಲಿ ಬದಲಿ ಕಾಮಗಾರಿಗಳಿಗೆ ಹಾಗೂ ಮುಂದುವರೆದ ಕಾಮಗಾರಿಗಳಿಗೆ ಒಟ್ಟು ಮೊತ್ತ ರೂ.311.00 ಲಕ್ಷಗಳಿದ್ದು, ರೂ.189.00 ಲಕ್ಷಗಳು ಉಳಿತಾಯವಾಗಲಿದೆ.

ಸದರಿ ಉಳಿತಾಯದ ಮೊತ್ತದಲ್ಲಿ ಪ್ರಸ್ತಾವನೆ ಮೊತ್ತ ರೂ.50.00 ಲಕ್ಷಗಳ ಅನುದಾನವನ್ನು ಭರಿಸಿಕೊಳ್ಳುವ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡುವ ಬಗ್ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:08-01-2014 ರ ಟಿಪ್ಪಣಿ.

**ನಿರ್ಣಯ:-** **ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08-01-2014 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಮೇಲಿನ ವಿಷಯಗಳ ಬಗ್ಗೆ ಚರ್ಚಿಸಿರುವಂತೆ ಕ್ರಮ ವಹಿಸಲು, ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ/-
(ಎಂ.ಮುನಿರಾಜು)
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :-**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಾಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಬೆಂಗಳೂರು ನಗರದ ಎಲ್ಲಾ ಮಾನ್ಯ ರಾಜ್ಯ ಸಭಾ ಸದಸ್ಯರು, ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಗೌರವಾನ್ವಿತ ಸಮಿತಿಯ ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ನಗರ ಪಾಲಿಕೆಯ 198 ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರಿಗೆ ಕಳುಹಿಸಲಾಗಿದೆ.*
- ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ *ರವರಿಗೆ ಕಳುಹಿಸಲಾಗಿದೆ.*
- *ಮುಖ್ಯ ಅಭಿಯಂತರರು(ಕೆರೆಗಳು-ಪರಿಸರಕೋಶ)ರವರಿಗೆ ಕಳುಹಿಸಲಾಗಿದೆ.*

- ಕಛೇರಿ ಪ್ರತಿ